ಈ) ಚಿಕ್ಕನಾಯಕನಹಳ್ಳಿ ವಲಯದಲ್ಲಿ ಐದು ವರ್ಷಗಳಿಂದ 1070-30 ಹೆಕ್ಟೇರ್ ವಿಸ್ತೀರ್ಣದಲ್ಲಿ ಈ ಕೆಳಗೆ ವಿವರಿಸಿರುವಂತೆ ನೆಡುತೋಪು ಬೆಳೆಸಲಾಗಿದೆ.

1) ಪ್ರಾದೇಶಿಕ ವಿಭಾಗ :

	ವರ್ಷವಾರು ವಿವರ ಈ ರೀತಿ ಇದೆ		ನೆಟ್ಟಿರುವ ಸಸಿಗಳ ಸಂಖ್ಯೆ	ಉಳಿದಿರುವ ಸಂಖ್ಯೆ
1)	89-90	85.50 ಹೆ.		
2)	90-91	40.50 ಹೆ.	404170	ಶೇಕಡ 80
3)	91-92	105.00 ಹೆ.		ರಷ್ಟು
4)	92-93	110.00 ಹೆ.		ಉಳಿದಿದೆ
5)	93-94	108.30 ಹೆ.		
		449.30 ಹೆ.		

2) ಸಾಮಾಜಿಕ ಅರಣ್ಯ ವಿಭಾಗ

1)	89-90	125.00 ಹೆ.		
2)	90-91	88.00 ಹೆ.		
3)	91-92	50.00 ಹೆ.	6.723	ಶೇಕಡ 65
4)	92-93	211.00 ಹೆ.	ಲಕ್ಷ	ರಿಂದ
5)	93-94	147.00 ಹೆ.		70 ಉಳಿದಿರುತ್ತದೆ
		621.00 ಹೆ.		

ಅರಣ್ಯ ಜಮೀನಿನ ಅಭಿವೃದ್ಧಿಗೆ ಖರ್ಚಾದ ಹಣ

380ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಜಮೀನಿನ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಮಾಡಲಾಗಿರುವ ಹಣವೆಷ್ಟು? ಇದರಲ್ಲಿ ಸಿಬ್ಬಂದಿ ವೆಚ್ಚವೇನು, ಅರಣ್ಯ ಅಭಿವೃದ್ಧಿಗಾಗಿಯೇ ಮಾಡಿದ ಖರ್ಚು ಎಷ್ಟು?

ಆ) ಅರಣ್ಯ ಇಲಾಖಾವತಿಯಿಂದ ಹಾಕಲಾಗಿದ್ದ ತುಮಕೂರು ಜಿಲ್ಲೆಯಲ್ಲಿ ಮರಗಳು ಅದರಲ್ಲೂ ನೀಲಗಿರಿ ಮರಗಳನ್ನು ಹಾಡುಹಗಲೇ ಕಡಿದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಅರಣ್ಯ ಅಭಿವೃದ್ಧಿಗಾಗಿ ಹಾಗೂ ಸಿಬ್ಬಂದಿ ವೆಚ್ಚಕ್ಕಾಗಿ ಕಳೆದ ಐದು ವರ್ಷಗಳಲ್ಲಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಖರ್ಚು ಮಾಡಿದ ವೆಚ್ಚದ ವಿವರವು ಈ ಕೆಳಕಂಡಂತೆ ಇದೆ.

ವರ್ಷ	ಸಿಬ್ಬಂದಿವೆಚ್ಚ	ಅರಣ್ಯಾಭಿವೃದ್ಧಿಗೆ ಖರ್ಚು ಮಾಡಿದ ಹಣ	ಒಟ್ಟು ವೆಚ್ಚ
			(ರೂ. ಲಕ್ಷಗಳಲ್ಲಿ)
1989-90	7,14,160	12,93,044	20,07,204
1990-91	7,25,489	10,83,597	18,09,086
1991-92	8,38,883	15,26,900	23,65,783
1992-93	8,39,515	19,36,603	27,76,118
1993-94	10,03,312	22,53 187	32,56,499

ಆ) ಹೌದು

ಇ) ತುಮಕೂರು ಜಿಲ್ಲೆಯಲ್ಲಿ ಮರಗಳನ್ನು ಅದರಲ್ಲೂ ನೀಲಗಿರಿ ಮರಗಳನ್ನು ಕಡಿದುಕೊಂಡು ಹೋಗುವುದನ್ನು ತಪ್ಪಿಸಲು ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಅಕ್ರಮವಾಗಿ ನೀಲಗಿರಿ ಮರಗಳನ್ನು ಕಡಿದವರನ್ನು ಹಿಡಿದು ಅರಣ್ಯ ಕಾಯಿದೆಯ ಪ್ರಕಾರ ಕ್ರಮ ಜರುಗಿಸಿ ಅವರುಗಳಿಂದ ಕಾನೂನು ರೀತ್ಯ ದಂಡ ವಸೂಲಿ ಮಾಡಲಾಗಿದೆ. ಹಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇರುತ್ತದೆ. ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಕ್ಷೀಣಿತ ಅರಣ್ಯಗಳನ್ನು ಮತ್ತು ನೆಡುತೋಪುಗಳನ್ನು ನಿರ್ವಹಿಸಲು ಆ ಸಮಿತಿಗೆ ವಹಿಸಿ ಕೊಡಲಾಗಿರುತ್ತದೆ. ನೆಡು ತೋಪುಗಳ ರಕ್ಷಣೆ ಸ್ಥಳೀಯ ಜನರಿಂದ ಆಗುವುದರಲ್ಲಿ ಸಂಶಯವಿಲ್ಲ. ಇದರ ಜೊತೆಗೆ ಅರಣ್ಯ ಇಲಾಖೆಯ ಸಿಬ್ಬಂದಿಯೂ ಸಹ ರಾತ್ರಿ ಪಹರೆ ನಡೆಸಲು ವ್ಯವಸ್ಥೆ ಮಾಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿ ವಿಷಯದಲ್ಲಿ ಕೃಪಾಂಕನೀಡಿದ ಬಗ್ಗೆ

381 ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ನೇಮಕಾತಿ ಮಾಡಿದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಇದರಲ್ಲಿ ಆಯ್ಕೆ ಆದವರಿಗಿಂತ ಹೆಚ್ಚಿನ ಅಂಶಗಳಿಸಿದ್ದಾಗ್ಯೂ ಆಯ್ಕೆ ಮಾಡಿಲ್ಲವೆಂದು ಸಲ್ಲಿಸಿರುವ ತಕರಾರುಗಳೆಷ್ಟು?

ಇ) ಹೀಗಾಗಲು ಕಾರಣವೇನು? ಹಾಗೂ ಇದನ್ನು ಸರಿಪಡಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 901

ಆ) 157

ಇ) ಕೆಲವು ಗಣಕೀಕರಣದ ತಪ್ಪಿನಿಂದಾಗಿ ಮತ್ತೆ ಕೆಲವು ದಾಖಲೆಗಳಲ್ಲಿ ವ್ಯತ್ಯಾಸವಿರುವ ಘೋಷಣಾ ಪತ್ರ ನೀಡಿದ್ದರಿಂದ ನಿಯಮಾನುಸಾರ ಅರ್ಹತೆ ಇದ್ದು ಸೂಕ್ತ ಮಾಹಿತಿ ಇರುವ ಪ್ರಕರಣಗಳನ್ನು ಸರಿಪಡಿಸಲಾಗುವುದು.

ಗ್ರಾಮೀಣ ಪ್ರದೇಶದ ಶಿಕ್ಷಕರ ನೇಮಕಾತಿಯಲ್ಲಿ ನೀಡಿದ ಕೃಪಾಂಕ

381 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?